ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

**File No:** DTE-ADMI0ACM1/09/2022

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಬೆಂಗಳೂರು-560 001,
ದಿನಾಂಕ:22-03-2022.

**-:: ಸುತ್ತೋಲೆ ::-**

ವಿಷಯ: 2021-22ನೇ ಸಾಲಿನ ಕಾಮೆಡ್-ಕೆ/ಕೆ.ಆರ್.ಎಲ್.ಎಂ ಮತ್ತು ಆಡಳಿತ ಮಂಡಳಿ ಕೋಟಾ (5%/25%/30%) ಹಾಗೂ ಲ್ಯಾಟರಲ್ ಎಂಟ್ರಿ ಆಡಳಿತ ಮಂಡಳಿ ಕೋಟಾ ಪ್ರವೇಶಗಳಿಗೆ ಅನುಮೋದನೆ ಪಡೆಯುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ದಿ:29-01-2022 & 07-03-2022.
2. ಸರ್ಕಾರದ ಆದೇಶ ಸಂ. ಇಡಿ 36 ಡಿಟಿಇ 2022, ದಿ:04-03-2022.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) & (2)ರ ಈ ಕಛೇರಿ ಸುತ್ತೋಲೆಯನ್ನು ಮುಂದುವರೆಸುತ್ತಾ, ರಾಜ್ಯದ ಎಲ್ಲಾ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಪ್ರಥಮ ವರ್ಷದ ಬಿ.ಇ ಕಾಮೆಡ್-ಕೆ, ಆಡಳಿತ ಮಂಡಳಿ ಕೋಟಾ (ಸಿಇಟಿ ಹಾಗೂ ಕಾಮೆಡ್-ಕೆ ಕೋಟಾದಡಿ ಭರ್ತಿ ಆಗದ ಉಳಿಕೆ ಸೀಟುಗಳನ್ನು ಹೊರತುಪಡಿಸಿ) ಹಾಗೂ ಲ್ಯಾಟರಲ್ ಎಂಟ್ರಿ ಆಡಳಿತ ಮಂಡಳಿ ಕೋಟಾ ಪ್ರವೇಶಗಳಿಗೆ ಮಾತ್ರ ಅನುಮೋದನೆ ಪಡೆಯಲು ಹಾಗೂ ಆಡಳಿತ ಮಂಡಳಿ ಪ್ರವೇಶ ಸಂಬಂಧ ಈಗಾಗಲೇ ನೀಡಲಾಗಿರುವ ಪರಿಷ್ಕೃತ ಅನುಬಂಧಗಳಲ್ಲಿ ಮಾಹಿತಿಯನ್ನು ನಮೂದಿಸಿ ಪೂರ್ಣ ಪ್ರಮಾಣದ ಪ್ರಸ್ತಾವನೆಗಳನ್ನು ಅಂತಿಮ **ದಿ:25-03-2022**ರ ಒಳಗಾಗಿ ಆಯುಕ್ತಾಲಯಕ್ಕೆ ಖುದ್ದು ಹಾಜರಾಗಿ ಪ್ರವೇಶಾನುಮೋದನೆ ಪಡೆಯಲು ಈ ಮೂಲಕ ಸೂಚಿಸಿದೆ. ತಪ್ಪಿದ್ದಲ್ಲಿ, ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಆಗುವ ಯಾವುದೇ ತೊಂದರೆಗಳಿಗೆ ಸಂಬಂಧಪಟ್ಟ ಪ್ರಾಂಶುಪಾಲರುಗಳನ್ನೇ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು. ದಿ:25-03-2022ರ ನಂತರ ಸಲ್ಲಿಸುವ ಪ್ರಸ್ತಾವನೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

22/3/22

ಸಹಾಯಕ ನಿರ್ದೇಶಕರು(ಎಂಪಿಸಿ)
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

*ರಾಜ್ಯದ ಎಲ್ಲಾ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ,*

ಪ್ರತಿ:-

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಇ-ಗವರ್ನೆನ್ಸ್ ವಿಭಾಗಕ್ಕೆ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು ತಿಳಿಸಲಾಗಿದೆ.
4. ಕಛೇರಿ ಪ್ರತಿ.

Scanned with CamScanner